ವಿಷಯ:- ಧಾರವಾಡ ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಷೆಡ್ಡುಗಳ ನಿರ್ಮಾಣದಲ್ಲಿ ಪ್ರಗತಿ

280 (2098) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಕೈಗಾರಿಕಾ ಮಳಿಗೆಗಳಿವೆ?

ಆ) ಶಿಗ್ಗಾಂವ್ ತಾಲ್ಲೂಕಿನಲ್ಲಿ ಮಳಿಗೆಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ?

ಇ) ಈ ಮಳಿಗೆಗಳನ್ನು ಯಾವಾಗ ಯಾರಿಗೆ ವಿತರಿಸಲಾಗುತ್ತದೆ?

ಈ) ಈ ಮಳಿಗೆಗಳ ಹಂಚಿಕೆಯಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಆದ್ಯತೆ ನೀಡಲಾಗುತ್ತದೆಯೇ?

ಉ) ಸವಣೂರ್‌ನಲ್ಲಿ ಕೈಗಾರಿಕಾ ಶೆಡ್‌ಗಳ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ?

ಶ್ರೀ ಬಿ. ಎ. ಮೊಹಿದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) 554

ಆ) 4-ಸಿ ಹಾಗೂ 4-ಸೂಪರ್ ಮಿನಿ ಮಳಿಗೆಗಳ ನಿರ್ಮಾಣ ಕಾರ್ಯವು ಎಲ್ಲಾ ರೀತಿಯಲ್ಲಿ ಪೂರ್ಣಗೊಂಡಿದ್ದು ಕೇವಲ ಕಿಟಕಿಯ ಗಾಜುಗಳನ್ನು ಮಾತ್ರ ಅಳವಡಿಸಬೇಕಾಗಿದ್ದು ಅದನ್ನು ವಿತರಣೆದಾರರಿಗೆ ಮಳಿಗೆಯನ್ನು ಸ್ವಾಧೀನಪಡಿಸುವಾಗ ಮಾಡಲಾಗುತ್ತದೆ.

ಇ) ವಿತರಣಾ ಪ್ರತಿಕ್ರಿಯೆಯು ಈಗಾಗಲೇ ಪ್ರಾರಂಭವಾಗಿದ್ದು ಪ್ರಕಟಣೆಯನ್ನು ಹೊರಡಿಸಲಾಗಿದೆ. ಈ ಪ್ರಕಟಣೆಗೆ ಅನುಗುಣವಾಗಿ ಬಂದಿರುವ ಅರ್ಜಿಗಳನ್ನು ವಿತರಣೆಯ ಸಲುವಾಗಿ ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.

ಶಿಗ್ಗಾಂವ್ ಕೈಗಾರಿಕಾ ವಸಾಹತುವಿನಲ್ಲಿ ನಿರ್ಮಿಸಿರುವ ಒಟ್ಟು 8 ಮಳಿಗೆಗಳಲ್ಲಿ 4-ಸಿ ಮಳಿಗೆಗಳು ಐಎಫ್‌ಎಸ್ ಯೋಜನೆ ಆಧಾರದಲ್ಲಿ ಕಟ್ಟಲಾಗಿದ್ದು ಸರ್ಕಾರವು ಈ ನಿಟ್ಟಿನಲ್ಲಿ ಹೊರಡಿಸಿರುವ ಆದೇಶದನ್ವಯ ಅರ್ಹ ಉದ್ದಿಮೆದಾರರಿಗೆ ವಿತರಿಸಲಾಗುವುದು.

4-ಸೂಪರ್ ಮಿನಿ ಮಳಿಗೆಗಳನ್ನು ಡಾ।। ಬಿ.ಆರ್. ಅಂಬೇಡ್ಕರ್ ಜನ್ಮಶತಾಬ್ಧಿ ಕಾರ್ಯಕ್ರಮದಲ್ಲಿ ನಿರ್ಮಿಸಲಾಗಿದ್ದು ಈ ಮಳಿಗೆಗಳು ಪ್ರತ್ಯೇಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ವಿತರಿಸಲಾಗುತ್ತದೆ.

ಈ) ಹೌದು

ಉ) ಸವಣೂರಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಸುಮಾರು 15 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

1996-97ನೇ ಸಾಲಿನಲ್ಲಿ ಸಣ್ಣ ಪ್ರಮಾಣದ ಉದ್ದಿಮೆದಾರರಿಂದ ಮಳಿಗೆಗಳಿಗೆ ಬರಬಹುದಾದ ಖಚಿತವಾದ ಬೇಡಿಕೆಯನ್ನು ಆಧರಿಸಿ ಮಳಿಗೆಗಳನ್ನು ನಿರ್ಮಿಸಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರು:- ಸನ್ಮಾನ್ಯ ಅಧ್ಯಕ್ಷರೆ, ಶಿಗ್ಗಾಂವಿ ತಾಲ್ಲೂಕಿನಲ್ಲಿ ಇಂಡಸ್ಟ್ರೀಯಲ್ ಮಳಿಗೆಗಳನ್ನು ಒಂದು ವರ್ಷದ ಹಿಂದೆಯೇ ಕಟ್ಟಿದ್ದು ಸಣ್ಣ ಪುಟ್ಟ ಕೆಲಸಗಳಾದ ಕಿಟಕಿಗಳಿಗೆ ಗಾಜುಗಳನ್ನು ಹಚ್ಚುವ ಕೆಲಸ ಮಾತ್ರ ಬಾಕಿ ಇದೆಯೆಂದು ಮಾನ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದಷ್ಟು ಬೇಗ ಬಾಕಿ ಉಳಿದಿರುವ ಕೆಲಸವನ್ನು ಮಾಡಿ ಉದ್ದಿಮೆದಾರರಿಗೆ ಮಳಿಗೆಗಳನ್ನು ಹಂಚತಕ್ಕಂಥ ಕೆಲಸ ಮಾಡಬೇಕು. ಆಮೇಲೆ ಸ್ಥಳೀಯರಿಗೆ ಮಾತ್ರ ಈ ಮಳಿಗೆಗಳನ್ನು ಕೊಡಲಾಗುತ್ತದೆಯೇ ಎಂದು ಕೇಳಿರುವುದಕ್ಕೆ ''ಹೌದು'' ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಹುಬ್ಬಳ್ಳಿಯಿಂದಲೂ ಶಿಗ್ಗಾಂವಿಯಲ್ಲಿ ಮಳಿಗೆಗಳನ್ನು ಕೇಳಿದ್ದಾರೆಂದು ತಿಳಿದು ಬಂದಿದೆ, ಆದುದರಿಂದ, ಈ ಮಳಿಗೆಗಳನ್ನು ಸ್ಥಳೀಯರಿಗೆ ಮಾತ್ರ ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್:- ಮಾನ್ಯ ಅಧ್ಯಕ್ಷರೆ, ಸ್ಥಳೀಯರಿಗೆ ಪ್ರಾಶಸ್ತ್ಯ ಕೊಡಬೇಕೆನ್ನುವ ಉದ್ದೇಶದಿಂದಲೇ ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ವಸಾಹತುಗಳನ್ನು ಮಾಡಲಾಗಿರುವುದರಿಂದ ಸ್ಥಳೀಯರಿಗೆ ಆದ್ಯತೆ ಕೊಡಲಾಗುತ್ತದೆ. ಮಳಿಗೆಗಳನ್ನು ಅಲಾಟ್ ಮಾಡಿದ ತಕ್ಷಣ ಅವುಗಳಿಗೆ ಕಿಟಕಿ ಗಾಜುಗಳನ್ನು ಹಾಕುವ ಕೆಲಸವನ್ನು ನಾವು ಕೈಗೆತ್ತಿಕೊಳ್ಳುತ್ತೇವೆ. ಇದರ ಜೊತೆಗೆ ತಮ್ಮ ಕ್ಷೇತ್ರದ ಸವಣೂರು ಗ್ರಾಮದ ಹತ್ತಿರವೂ ಕೈಗಾರಿಕಾ ವಸಾಹತಿಗಾಗಿ 15 ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದೇವೆ. ನಮ್ಮ ಕಾರ್ಪೊರೇಷನ್ ಮೂಲಕ ತಾಲ್ಲೂಕು ಮಟ್ಟಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಡೆವಲಪ್ ಮಾಡಿ ಅವುಗಳ ಮೇನ್‌ಟೆನೆನ್ಸ್‌ನನ್ನು ಜಿಲ್ಲಾ ಪಂಚಾಯಿತಿಗೆ ಕೊಡಬೇಕೆನ್ನುವ ಬಗ್ಗೆ ಅಧಿಕಾರಿಗಳೊಡನೆ ಚರ್ಚೆ ಮಾಡಲಾಗುತ್ತಿದೆ. ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಂಡ ಮೇಲೆ ಮಾನ್ಯ ಸದಸ್ಯರಿಗೆ ತಿಳಿಸಲಾಗುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೆ, ಸವಣೂರಿನಲ್ಲಿ 10 ವರ್ಷಗಳ ಹಿಂದೆಯೇ 15 ಎಕರೆಯಷ್ಟು ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದರೂ ಇನ್ನೂ ಕೆಲಸವನ್ನು ಪ್ರಾರಂಭ ಮಾಡಿರುವುದಿಲ್ಲ. ಆದುದರಿಂದ, ತಾವು ಕೂಡಲೇ ಆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್:- ಆಗಬಹುದು.

ವಿಷಯ:- ಬೇಲೂರು ತಾಲ್ಲೂಕಿನಲ್ಲಿ ಮೆಟ್ರಿಕ್ ಪೂರ್ವ ಹಾಸ್ಟೆಲ್ ಸ್ಥಾಪನೆ.

281 (1749) **ಶ್ರೀ ಹೆಚ್.ಕೆ. ಕುಮಾರಸ್ವಾಮಿ.(ಬೇಲೂರು):-** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇಲೂರು ತಾಲ್ಲೂಕಿನಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಬಯಸಿ ಹೆಚ್ಚು ಮಕ್ಕಳ ಅರ್ಜಿಗಳು ಬಂದಿರುವುದು ನಿಜವೆ?